ಸಿ.ಸಿ .ನಂ.137/2023 ಪಿಡಬ್ಲೂಃ 1

ದಿನಾಂಕಃ 07-03-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಮ್ ಟಿ ಹೆಚ್ ವಕೀಲರಿಂದಃ**

3. ನಾನು ಚಂದಾವರದಲ್ಲಿ ಗ್ಯಾರೇಜ್ ಕೆಲಸವನ್ನು ಮಾಡುತ್ತಿದ್ದೇನೆ . ನಾನು ಸದ್ರಿ ಕೆಲಸವನ್ನು ಸುಮಾರು 25 ವರ್ಷಗಳಿಂದ ಮಾಡುತ್ತಿದ್ದೇನೆ . ನನ್ನ ಹತ್ತಿತ ಮುಂಚೆ ಸ್ವಂತ ಗ್ಯಾರೇಜ್ ಇತ್ತು , ಅದನ್ನು ಬಂದು ಮಾಡಿರುತ್ತೇನೆ. ನನ್ನ ಸ್ವಂತ ಗ್ಯಾರೇಜ್ ನ್ನು ಬಂದು ಮಾಡಿ ಸುಮಾರು 4 ವರ್ಷಗಳಾಯಿತು. ಈಗ ನಾನು ಚಂದಾವರದಲ್ಲಿ ರವಿ ಗ್ಯಾರೇಜ್ ನಲ್ಲಿ ಕೆಲಸ ಮಾಡುತ್ತಿದ್ದೇನೆ . ನನಗೆ ಸದರಿ ಗ್ಯಾರೇಜ್ ನ ಮಾಲೀಕರು ಪ್ರತಿ ತಿಂಗಳು ಸಂಬಳವನ್ನು ಕೊಡುತ್ತಿದ್ದಾರೆ . ನಾನು ಕೆಲಸ ಮಾಡಿದರೆ ಪ್ರತಿದಿನ ನನಗೆ 500/- ರೂಪಾಯಿಯನ್ನು ಕೊಡುತ್ತಾರೆ . ಮೇಲೆ ಹೇಳಿದ ನನ್ನ ಸ್ವಂತ ಗ್ಯಾರೇಜ್ ನನ್ನ ತಮ್ಮ ನಡೆಸುತ್ತಿದ್ದ ಗ್ಯಾರೇಜ್ ಆಗಿತ್ತು. ಸದರಿ ಗ್ಯಾರೇಜ್ ಗೆ ನನ್ನ ತಮ್ಮ ಮಾಲೀಕನಾಗಿರುತ್ತಾನೆ . ನಾನು ನನ್ನ ತಮ್ಮನ ಸದರಿ ಗ್ಯಾರೇಜ್ ನಲ್ಲಿ ಕೆಲಸ ಮಾಡುತ್ತಿದಾದಗ ನನಗೆ ತಿಂಗಳಿಗೆ ಅಥವಾ ದಿನಕ್ಕೆ ಅಥವಾ ವಾರಕ್ಕೆ ಇಂತಿಷ್ಟೆ ಸಂಬಳ ಎಂದು ಕೊಡುತ್ತಿರಲಿಲ್ಲ, ಅವನು ನನ್ನ ಖರ್ಚಿಗೆ ಹಣವನ್ನು ಕೊಡುತ್ತಿದ್ದನು . ನನ್ನ ತಮ್ಮ ವಾರಕ್ಕೆ ಖರ್ಚಿಗೆ ಎಂದು ನನಗೆ ಒಂದು ಸಾವಿರ ರೂಪಾಯಿಯನ್ನು ಕೊಡುತ್ತಿದ್ದರು . ನಾನು ಬಿಪಿಎಲ್ ಪಡಿತರ ಚೀಟಿದಾರನಾಗಿರುತ್ತೇನೆ . ಸದರಿ ಬಿಪಿಎಲ್ ಪಡಿತರ ಚೀಟಿಯಲ್ಲಿ ನನ್ನ , ನನ್ನ ಹೆಂಡತಿ ಹಾಗೂ ನನ್ನ ಇಬ್ಬರ ಮಕ್ಕಳು ಹೆಸರು ಮಾತ್ರ ಇದೆ .

4. ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲ . ನನ್ನ ಹೆಂಡತಿಗೂ ಸಹ ಬ್ಯಾಂಕಿನ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲ . ನಾನು ಆದಾಯ ತೆರಿಗೆಯನ್ನು ಕಟ್ಟುವುದಿಲ್ಲ ಎಂದರೆ ಸರಿ . ಆರೋಪಿಯು ನನಗೆ ಈಗ್ಗೆ ಸುಮಾರು 10 ರಿಂದ 13 ವರ್ಷಗಳಿಂದ ಪರಿಚಯ ಇದ್ದಾರೆ . ನನ್ನ ಸ್ನೇಹಿತನಾದ ಮಾಸೂರಿನ ನಾಗೇಶ ಮಡಿವಾಳ ರವರ ಮುಖಾಂತರ ನನಗೆ ಆರೋಪಿಯು ಪರಿಚಯವಾಗಿರುತ್ತಾರೆ . ಈಗ

ಪಿಡಬ್ಲೂಃ 1

ಆರೋಪಿಯು ತಾಲೂಕು ಪಂಚಾಯತ್ ನಲ್ಲಿ ಕೆಲಸ ಮಾಡುತ್ತಿದ್ದಾರೆ . ಆರೋಪಿಯು ಸದರಿ ತಾಲೂಕು ಪಂಚಾಯತ್ ನಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ . ಈ ಪ್ರಕರಣದ ಫಿರ್ಯಾದನ್ನು ಹಾಗೂ ನನ್ನ ಪ್ರಮಾಣ ಪತ್ರವನ್ನು ತಯಾರಿಸಲು ನನ್ನ ವಕೀಲರಿಗೆ ನನ್ನ ಹೆಂಡತಿಯ ಅಣ್ಣನಾದ ದಾನೇಶ್ವರ ಮಾಹಿತಿಯನ್ನು ನೀಡಿರುತ್ತಾರೆ . ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ .

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.